ಶ್ರೀ ಎನ್. ರಾಚಯ್ಯ.—ಅದಕ್ಕೆ ಒಂದು ಪ್ರತ್ಯೇಕ ಶಿಬ್ಬಂದಿಯನ್ನು ನೇಮಕ ಮಾಡುವುದೆಂದರೆ ಕಾಲವಿಳಂಬವಾಗುತ್ತದೆಂದು ಹಾಲಿ ಸೋಷಿಯಲ್ ವೆಲ್‌ಫೇರ್ ಇಲಾಖೆ ಮತ್ತು ಸ್ಟ್ಯಾಟಿಸ್ಟಿಕ್ಸ್ ಇಲಾಖೆಯ ಶಿಬ್ಬಂದಿಯನ್ನು ನೇಮಕ ಮಾಡಿ ಆ ಕೆಲಸವನ್ನು ಈಗಾಗಲೇ ಕೈಗೊಳ್ಳಲಾಗಿದೆ. ಆದಷ್ಟು ಬೇಗ ಒದಗಿಸುವಂತೆ ಅವರಿಗೆಲ್ಲಾ ಸೂಚನೆ ಕೊಡಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು ಹೇಳಿದ ಸೋಷಿಯೋ ಎಕನಾಮಿಕ್ ಸರ್ವೆ ನಡೆಸಿ ಆ ಅಂಕೀ ಅಂಶಗಳನ್ನು ಸರ್ಕಾರದವರು ಅವರಿಗೊದಗಿಸಿ ಅವರು ಅವರ ಆ ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿದ್ದರೆ ಅವರಿಗೆ ದಿನಾಂಕ ೩೧ನೇ ಡಿಸಂಬರ್ ೧೯೭೪ ರೊಳಗೆ ಸಾಧ್ಯವಾಗುತ್ತದೆಯೆ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರ ಕಾತುರತೆಯನ್ನು ನಾನು ಮೆಚ್ಚುತ್ತೇನೆ. ಹಾಗೆ ಆಗತ್ಯ ಬಿದ್ದರೆ ಅವರಿಗೆ ಕಾಲದ ಅವಧಿಯನ್ನು ನಾವೂ ಹೆಚ್ಚಿಸಲೇಬೇಕಾಗುತ್ತದೆ. ಕೇರಳದಲ್ಲಿ ಅವರು ಇದಕ್ಕೆ ೪—೫ವರ್ಷ ತೆಗೆದುಕೊಂಡಿದ್ದಾರೆ.

**Constitution of Taluk level Committees to recommend Aid to Free Boardings*

32. SRI M. M. SAJJAN (Muddebihal).—

Will the Minister for Community for Development and Social Welfare be pleased to state:—

(*a*) the total amount of grant-in-aid paid to all kinds of free boardings during 1970-71, 1971-72 and 1972-73;

(*b*) the total amount paid towards the scheduled castes students only, taking meals, in such boardings, during 1970-71, 1971-72 and 1972-73;

(*c*) the total number of SC boarders in these boarding houses during each year, *i,e.*, 1970-71, 1971-72 and 1972-73;

(*d*) whether Government is aware that many free boardings claim and receive such aid maintaining false or bogus registers and accounts etc;

(*e*) whether Government has any proposal to constitute taluk level committees consisting of the Tahsildar, A.E.O., Head Master of the High Schools and Primary Schools and local M L.A. for recommending aid any free boardings which are maintaining regular and correct registers and accounts ?

SRI N. RACHAIAH (Minister for community Development and Social Welfare.—

(*a*) *Vide* Statement "A" placed on the Table of the House. Copies placed in the Karnataka Legislative library *vide* No. 4 dated 16-8 1974.

(*b*) *Vide* Statement "B" placed on the Table of the House Copies placed in the Karnataka Legislative library *vide* No. 4 dated 16-8-1974.

(*c*) *Vide* Statement "C" placed on the Table of the House Copies placed in the Karnataka Legiesletive library *vide* No. 4 dated 16-8-1974.

(*d*) No.
(*e*) No.

SRI M. M. SAJJAN.—May I know the reasons for the decrease in the payment of grants during 1970-71, 1971-72 and 1972-73 to the Free Boardings in the state?

† SRI N. RACHAIAH.—Admission of students generally depends upon the number of students that are entitled for grant during that particular year.

SRI M. M. SAJJAN.—From the answers furnished, I find that the grant for the S.C. Boarders has been reduced from year to year. Does it mean that the students are not admitted in any of the Boardings in the State ?

SRI N RACHAIAH.—That might be the cause. Anyway I shall got it verified.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಕೆಲವು ಈ ಹಾಸ್ಟಲುಗಳಲ್ಲಿ ಹರಿಜನ ವಿದ್ಯಾರ್ಥಿಗಳು ಇಲ್ಲದಿದ್ದರೂ ಮತ್ತು ಕಡಿಮೆ ಸಂಖ್ಯೆಯಲ್ಲಿದ್ದರೂ ಆ ಗ್ರಾಂಟ್ ಇನ್-ಎಯ್ಡ್ ಕೋಡಿನ ನಿಬಂಧನೆಗಳಿಗೆ ವಿರುದ್ಧವಾಗಿ ಗ್ರಾಂಟನ್ನು ಡ್ರಾ ಮಾಡುತ್ತಿರುವುದು ಗಮನಕ್ಕೆ ಬಂದ ನಂತರ ಅದನ್ನು ತಪ್ಪಿಸಲು ಸರ್ಕಾರದವರೇನು ಕ್ರಮಗಳನ್ನು ಕೈಗೊಂಡಿದ್ದಾರೆ ?

† ಶ್ರೀ ಎನ್. ರಾಚಯ್ಯ.—ಅಂಥ ಲೋಪದೋಷಗಳು ಇದ್ದಲ್ಲಿ ಕೂಡಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ಕೆಲವು ಜಿಲ್ಲೆಗಳ ಹಾಸ್ಟಲುಗಳಲ್ಲಿ ಅಂದರೆ ಕೋಲಾರ, ಕೊಡಗ್ ಶಿವಮೊಗ್ಗ ಮತ್ತು ಹಾಸನ ಇಲ್ಲೆಲ್ಲಾ ಹರಿಜನ ವಿದ್ಯಾರ್ಥಿಗಳೇ ಇರುವುದಿಲ್ಲ ಎಂದು ಹೇಳಿದೆ ಈ ಬಗ್ಗೆ ನಿಮ್ಮ ಖಾತೆಯವರು ಏನು ಮಾಡುತ್ತಿದ್ದಾರೆ ?

ಶ್ರೀ ಎನ್. ರಾಚಯ್ಯ.—ಇದ್ದ ವಿಷಯವನ್ನು ತಿಳಿಸಲಾಗಿದೆ.

**Inspection of Offices by Employment Cell of Social Welfure Department*

47. SRI K. SIDDAIAH (Santhemarahally).—

Will the Minister for Community Development and Social Welfare be pleased to state:—

(*a*) the number of offices inspected by the officer attached to Social Welfare Department, 'Employment, Cell" during 1973 in respect of matters of recruitment, appointments and promotion of SCs. and STs people;

(*b*) the nature of irregularities in those matters reported by him (a copy of the report to be placed on the Table of the House);

(*c*) the action taken to set right those irregularities;

(*d*) whether Government has prescribed any specific punishment for any specific offence in respect of the above mentioned irregularities;

(*e*) if so, what are they ?